# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

**ಪ್ರಾದೇಶಿಕ ಕಛೇರಿ, ಕುಸನೂರ ರಸ್ತೆ, ಕಲಬುರಗಿ – 585105**

**ಡಾ. ಬಸವರಾಜ ಗಾದ್ಗೆ** — ☎ : 08472–256155/245150

ಪ್ರಭಾರಿ ಪ್ರಾದೇಶಿಕ ನಿರ್ದೇಶಕರು — Fax : 08472 256156/256110/245152


ಸಂ:ವಿತಾವಿ/ಕಲ/ಪ್ರಾದೇ/ಎ4/ಇಎಸ್‌ಟಿ/2019–20/ 821 — ದಿನಾಂಕ: 13 ಆಗಸ್ಟ್ 2019

## "ಅಧಿಸೂಚನೆ"

**ವಿಷಯ: 2019–20 ನೇ ಶೈಕ್ಷಣಿಕ ಸಾಲಿನಲ್ಲಿ ಕಲಬುರಗಿಯ ಪ್ರಾದೇಶಿಕ ಕಛೇರಿಯಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಅಧಿಸೂಚನೆ ಬಗ್ಗೆ.**

**ಉಲ್ಲೇಖ: ಕುಲಸಚಿವರು, ವಿತಾವಿ, ಬೆಳಗಾವಿ ಇವರ ಅನುಮೋದನೆಯ ಪತ್ರ ಸಂಖ್ಯೆ ವಿತಾವಿ/ಬಿಜಿಎಮ್/ ಡಿಪಿಎಆರ್/ಸಿಆರ್(03)/11/2019–20/1348 ದಿನಾಂಕ: 09/ಆಗಸ್ಟ್ 2019.**

ವಿ.ತಾ.ವಿ. ಸ್ನಾತಕೋತ್ತರ ಕಛೇರಿಯಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ 2019–20ನೇ ಶೈಕ್ಷಣಿಕ ಸಾಲಿನಲ್ಲಿ ಲಭ್ಯವಿರುವ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯಡಿ ನೇಮಕವಾಗುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಸಂಚಿತ ವೇತನ ರೂಪಾಯಿ 25,000=00 (ರೂಪಾಯಿ ಇಪ್ಪತ್ತೈದು ಸಾವಿರ) ಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಪ್ರಾದೇಶಿಕ ಕಛೇರಿಯ e-mail (vtuklb.recruitment@gmail.com)ಗೆ **ದಿನಾಂಕ:14–08–2019** ರ ಬೆಳಗ್ಗೆ 10.00 ಗಂಟೆಯಿಂದ **ದಿನಾಂಕ: 28–08–2019** ರ ಸಂಜೆ 5.00 ಗಂಟೆಯವರೆಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಬಯೋಡೇಟಾ (Resume)ವನ್ನು e-mail ಮೂಲಕ ಸಲ್ಲಿಸಿದ ನಂತರ ಅದರ ಪ್ರಿಂಟ್ ತೆಗೆದು ಬಯೋಡೇಟಾ ಜೊತೆ ಶುಲ್ಕಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಪಾವತಿಸಿದ ರಶೀದಿ (online payment receipt), ಶೈಕ್ಷಣಿಕ ದಾಖಲೆಗಳಾದ ಅಂಕ ಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಮೀಸಲಾತಿಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಿ, ಇವುಗಳನ್ನು ಪ್ರಭಾರಿ ಪ್ರಾದೇಶಿಕ ನಿರ್ದೇಶಕರು & ಸಂಯೋಜನಾಧಿಕಾರಿಗಳು, ಪ್ರಾದೇಶಿಕ ಕಛೇರಿ, ಕುಸನೂರ ರಸ್ತೆ, ಕಲಬುರಗಿ–585 105 ಇವರಿಗೆ **ದಿನಾಂಕ: 28–08–2019 ರ ಸಂಜೆ 05.00** ಗಂಟೆಯೊಳಗಾಗಿ ತಲುಪುವಂತೆ ಅಂಚೆಯ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

**ಅರ್ಜಿ ಶುಲ್ಕ– ಈ ಕೆಳಗೆ ತಿಳಿಸಿರುವ ಪ್ರಕಾರ ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.**

| | |
|---|---|
| ಸಾಮಾನ್ಯ ವರ್ಗ, ಪ್ರವರ್ಗ 2(ಎ), 2(ಬಿ), 3(ಬಿ), ಗೆ ಸೇರಿದ ಅಭ್ಯರ್ಥಿಗಳಿಗೆ | ರೂ. 500/– |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ – 1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ. 250/– |

ಅರ್ಜಿ ಶುಲ್ಕವನ್ನು (The Finance Officer, VTU, Belagavi), ಹಣಕಾಸು ಅಧಿಕಾರಿಗಳು, ವಿತಾವಿ, ಬೆಳಗಾವಿಯವರ ಖಾತೆಗೆ ಆನ್‌ಲೈನ್ ಮುಖಾಂತರ (online payment) ಅರ್ಜಿ ಶುಲ್ಕ ಪಾವತಿಸಿ, ಪಾವತಿಸಿರುವ ವಿವರಗಳನ್ನು (UTR Number) ಬಯೋಡೇಟಾ (Bio-Data) ಜೊತೆ ಲಗತ್ತಿಸತಕ್ಕದ್ದು.

## For online payment:

**http://vtu.ac.in/online-fee-payment/**
**Select Payment Category**
**D-FEES TO BE PAID BY COLLEGE FOR P G COURSES**
**OTHERS: 500 or 250**
**Remarks : Application for Guest Faculty**
**Submit**

ಬಯೋಡೇಟಾ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಮುಗಿದ ನಂತರ ಸಂದರ್ಶನ ನಡೆಸುವ ಮೂಲಕ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಲಾಗುವುದು.

ಸಂದರ್ಶನ ನಿಗದಿ ಪಡಿಸಿದ ದಿನಾಂಕಗಳನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದಿಲ್ಲ. ಆದರೆ ಸಂದರ್ಶನ ನಡೆಯುವ ದಿನಾಂಕ ಮತ್ತು ವೇಳೆ, ಸಂದರ್ಶನ ನಡೆಯುವ ಸ್ಥಳದ ಮಾಹಿತಿಯ ವಿವರಗಳನ್ನು ಕಛೇರಿಯ e-mail ಮುಖಾಂತರ ತಿಳಿಸಲಾಗುವುದು. ಅಭ್ಯರ್ಥಿಗಳು e-mail ಸಂದರ್ಶನದ ದಿನಾಂಕವನ್ನು ಖಚಿತ ಪಡಿಸಿಕೊಂಡು ಸಂದರ್ಶನಕ್ಕೆ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ.

| ಕ್ರಮ ಸಂ | ವಿಭಾಗ | ಹುದ್ದೆಗಳ ಸಂಖ್ಯೆ | **ನಿಗಧಿ ಪಡಿಸಿರುವ ವಿದ್ಯಾರ್ಹತೆ : ಎ.ಐ.ಸಿ.ಟಿ.ಇ. ನಿಯಮಗಳಂತೆ**<br>**Eligibility : As per AICTE norms**<br>**ಸೂಚನೆ:- ಈ ಹಿಂದೆ ಬೋಧನಾ ಅನುಭವವಿರುವವರು ಅನುಭವ ಪ್ರಮಾಣ ಪತ್ರ ಲಗತ್ತಿಸಬೇಕು.** |
|---|---|---|---|
| 1 | Mechanical Engineering | 02<br>02 | Specialization<br>a) Machine Design.<br>b) Thermal Power Engineering. |
| 2 | Electronics & Communication Systems | 03<br>04 | Specialization<br>a)VLSI Design and Embedded Systems<br>b) Digital Electronic and Communication System |
| 3 | Master of Computer Applications | 03 | Specialization<br>MCA/M.Tech. in Computer Science and Engineering |
| 4 | Civil Engineering | 01<br>04 | Specialization<br>a) Construction Technology<br>b) Highway Technology |
| 5 | Computer Science & Engineering | 01 | Specialization<br>Computer Science and Engineering |

**ವಿಶೇಷ ಸೂಚನೆಗಳು** :-

1) ಅಭ್ಯರ್ಥಿಗಳು ಬಯೋಡೇಟಾವನ್ನು e-mail ಮೂಲಕ ಸಲ್ಲಿಸುವ ಮೊದಲು ಕೊಟ್ಟಿರುವ ಎಲ್ಲಾ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು ಮತ್ತು ತಪ್ಪಾಗದಂತೆ ನೋಡಿಕೊಳ್ಳುವುದು. ಸರಿಯಾದ ಮಾಹಿತಿ ನೀಡದೇ ಇರುವ ಅಪೂರ್ಣ ಮಾಹಿತಿಯುಳ್ಳ ಬಯೋಡೇಟಾಗಳನ್ನು ತಿರಸ್ಕರಿಸಲಾಗುವುದು.

2) ಅಭ್ಯರ್ಥಿಯ ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಕಳುಹಿಸಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದು.

ಅ) ಬಣ್ಣದ ಭಾವಚಿತ್ರವು ಇತ್ತೀಚಿನದಾಗಿದ್ದು, ಅಳತೆಯಲ್ಲಿ 5.0 cm ಉದ್ದ x 3.6 cm ಅಗಲವುಳ್ಳದ್ದಾಗಿರಬೇಕು ಹಾಗೂ ಅದು jpg ನಮೂನೆಯಲ್ಲಿರಬೇಕು.

3) ಅಭ್ಯರ್ಥಿಗಳು ಬಯೋಡೇಟಾ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ, ಮುಂಚಿತವಾಗಿ ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿ ಹಿಂತಿರುಗಿಸಲಾಗುವುದಿಲ್ಲ.

4) ಕಛೇರಿಯ ಅಧಿಕೃತ e-mail ಮುಖಾಂತರ ದಿನಾಂಕ **28-08-2019ರ** ಸಂಜೆ 5.00 ಗಂಟೆಯವರೆಗೂ e-mail ಮೂಲಕ ಬಯೋಡೇಟಾವನ್ನು ಸಲ್ಲಿಸಬಹುದಾಗಿದೆ.

5) ಮೇಲ್ಕಂಡ ದಾಖಲೆಗಳು ನಿಗದಿತ ನಮೂನೆಯಲ್ಲಿ ಬಯೋಡೇಟಾ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಮೊದಲು ಪಡೆದ ದಾಖಲೆಗಳಾಗಿರಬೇಕು ಹಾಗೂ ಸದರಿ ದಾಖಲೆಗಳ ಮೂಲ ದಾಖಲೆಗಳನ್ನು ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಬೇಕು. ಬಯೋಡೇಟಾ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

6) ಅಭ್ಯರ್ಥಿಗಳು ಬಯೋಡೇಟಾವನ್ನು ಭರ್ತಿ ಮಾಡುವಾಗ ಯಾವುದೇ ಸುಳ್ಳು / ತಪ್ಪು ಮಾಹಿತಿಯನ್ನು ನೀಡಬಾರದು ಹಾಗೇ ನೀಡಿ ತದನಂತರ ನೇಮಕಾತಿ ಸಮಿತಿಗೆ ಅದು ಪತ್ತೆಯಾದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದು ಪಡಿಸಲಾಗುವುದು.

7) ಬಯೋಡೇಟಾವನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಂದರೆ ದಿನಾಂಕ **28-08-2019ಕ್ಕೆ** ಮೊದಲು ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರಬೇಕು.

8) ಅಭ್ಯರ್ಥಿಗಳು ಬಯೋಡೇಟಾದಲ್ಲಿ ತಪ್ಪು ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅದಕ್ಕೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ.

9) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಬಯೋಡೇಟಾ ಸಲ್ಲಿಸುವಾಗ ಆಯಾ ವಿಭಾಗಗಳ ಹೆಸರುಗಳನ್ನು ನಮೂದಿಸಿ ಪ್ರತ್ಯೇಕವಾಗಿ e-mail ಮೂಲಕ ಅರ್ಜಿಯನ್ನು ಸಲ್ಲಿಸಬೇಕು

10) ಅಭ್ಯರ್ಥಿಗಳು ಶುಲ್ಕ ಪಾವತಿಸದೇ ಸಲ್ಲಿಸಲ್ಪಡುವ, ಅಪೂರ್ಣವಾಗಿರುವ, ಸಹಿ ಮಾಡದ ಹಾಗೂ ಭಾವಚಿತ್ರ ಇಲ್ಲದೇ ಇರುವ ಬಯೋಡೇಟಾವನ್ನು ತಿರಸ್ಕರಿಸಲಾಗುವುದು.

11) i) ಮೀಸಲಾತಿ ಕೋರುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳನ್ನು e-mailನಲ್ಲಿ ಸಲ್ಲಿಸಿ, ಪ್ರತಿಯನ್ನು ಬಯೋಡೇಟಾದ ಜೊತೆ ಕೊನೆಯ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು.

ಎ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ನಮೂನೆ-ಡಿ ಪ್ರಮಾಣ ಪತ್ರ.

ಬಿ) ಪ್ರವರ್ಗ -1 ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ನಮೂನೆ-ಇ ಪ್ರಮಾಣ ಪತ್ರ.
ಸಿ) ಪ್ರವರ್ಗ 2(ಎ), 2(ಬಿ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶೀಲ್ದಾರ್ ಪಡೆದ ನಮೂನೆ-ಎಫ್ ಪ್ರಮಾಣ ಪತ್ರ.

**ಸೂಚನೆ:**-ನಮೂನೆ ಎಫ್ ಪ್ರಮಾಣ ಪತ್ರವು ಬಯೋಡೇಟಾ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ **28-08-2019ಕ್ಕೆ** ಐದು ವರ್ಷ ಹಳೆಯದಾಗಿರಬಾರದು.

ii) ಹೈದಾರಾಬಾದ್ ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರ ಇದ್ದಲ್ಲಿ ಅದರ ಜೆರಾಕ್ಸ್ ಪ್ರತಿಯನ್ನು ಭರ್ತಿ ಮಾಡಿದ ದಾಖಲೆಗಳ ಜೊತೆ ಲಗತ್ತಿಸಬೇಕು.

12) ಅಭ್ಯರ್ಥಿಯು ಬಯೋಡೇಟಾದಲ್ಲಿ ಭರ್ತಿ ಮಾಡಿದ ಮಾಹಿತಿಯು ಅಂತಿಮವಾಗಿರುತ್ತದೆ. ಭರ್ತಿ ಮಾಡಿ ಸಲ್ಲಿಸಿದಂತಹ ಬಯೋಡೇಟಾದಲ್ಲಿನ ಅಂಶ / ಮಾಹಿತಿಯನ್ನು ಯಾವುದೇ ಸಂದರ್ಭದಲ್ಲಿ ಬದಲಾವಣೆ ಮಾಡಲಾಗುವುದಿಲ್ಲ.

13) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾಣೆಯಾಗಿದ್ದಲ್ಲಿ, ತಕ್ಷಣ ಅಭ್ಯರ್ಥಿಗಳು ಲಿಖಿತ ಮೂಲಕ ಈ ಕೆಳಗೆ ಸಹಿ ಮಾಡಿರುವವರ ಗಮನಕ್ಕೆ ತರತಕ್ಕದ್ದು, ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಪ್ರಯತ್ನಿಸಲಾಗುವುದು. ಆದಾಗ್ಯೂ ಈ ವಿಚಾರದಲ್ಲಿ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

14) e-mailನಲ್ಲಿ ಬಯೋಡೇಟಾ ಸಲ್ಲಿಸದೇ ನೇರವಾಗಿ ಕಛೇರಿಗೆ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪ್ರಭಾರಿ ಪ್ರಾದೇಶಿಕ ನಿರ್ದೇಶಕರು
ವಿತಾವಿ ಪ್ರಾದೇಶಿಕ ಕಛೇರಿ ಕಲಬುರಗಿ.

ಗೆ,

1) ಮಾನ್ಯ ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ ಬೆಳಗಾವಿ. ಇವರಿಗೆ ಮೇಲ್ಕಂಡ ಅಧಿಸೂಚನೆಯನ್ನು ವಿತಾವಿ ವೆಬ್‌ಸೈಟ್ www.vtu.ac.in ನಲ್ಲಿ ಪ್ರಕಟಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಲಾಗಿದೆ.
2) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ ಬೆಳಗಾವಿ. ಇವರ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಕಛೇರಿ ಪ್ರತಿ.